O.S 6/2020

D.W.4

ಸಾಕ್ಷಿಯನ್ನು ದಿಃ 30-06-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ.ಎಮ್.ಎಸ್.ಬಿ, 1 ಮತ್ತು 2 ನೆ ಪ್ರತಿವಾದಿ ಪರ ವಕೀಲರಿಂದ

ವಾದಿ ಮತ್ತು 1 ನೇ ಪ್ರತಿವಾದಿ ನನ್ನ ಮಕ್ಕಳಿರುತ್ತಾರೆ ಎಂದರೆ ಸರಿ. ವಾದಿ ನನ್ನನ್ನು ನೋಡಿಕೊಳ್ಳುವುದಿಲ್ಲ. 1 ನೇ ಪ್ರತಿವಾದಿ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ನನ್ನ ಗಂಡನಿಗೆ ಶಿವಪ್ಪ, ಹಾಲಪ್ಪ, ಕಲ್ಲಪ್ಪ, ಬಸವಣ್ಣೆಪ್ಪ ಎಂಬ ಸಹೋದರರಿರುತ್ತಾರೆ. ನನ್ನ ಗಂಡ ಹಾಗೂ ಅವರ ಸಹೋದರರಿಗೆ ಇಟಗಿಯಲ್ಲಿ ಆಸ್ತಿಗಳಿದ್ದವು ಎಂದರೆ ಸರಿ. ಈ ದಾವೆಯಲ್ಲಿ ನನಗೆ ಪಾಲನ್ನು ನೀಡಬೇಕೆಂದು ಕೇಳಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೆಬ್ಬಾಳದಲ್ಲೂ ವಾಸವಿರುತ್ತೇನೆ. ನಾನು ಹೆಬ್ಬಾಳದಲ್ಲಿ ಪ್ರಕಾಶ ಮತ್ತು ಸುರೇಶ ಇವರೊಂದಿಗೆ ವಾಸವಿರುತ್ತೇನೆ. ನನ್ನ ದೈನಂದಿನ ಖರ್ಚುವೆಚ್ಚ ಹಾಗೂ ಆಗುಹೋಗುಗಳನ್ನು 1 ನೇ ಪ್ರತಿವಾದಿ ನೋಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನನಗೆ ಜೀವನಾಂಶವನ್ನು 1 ನೇ ಪ್ರತಿವಾದಿ ನೀಡುತ್ತಾರೆ ಎಂದರೆ ಸರಿಯಲ್ಲ. ಗೃಹಲಕ್ಷ್ಮೀ ಯೋಜನೆ, ವಿಧವಾವೇತನ ಹಾಗೂ ನನ್ನ ಸಂಬಂಧಿಕರು ನೀಡಿದ ಹಣದಲ್ಲಿ ಖರ್ಚುವೆಚ್ಚಗಳನ್ನು ನೋಡಿಕೊಳ್ಳುತ್ತೇನೆ. ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಮಾಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಗಂಡು ಮಕ್ಕಳು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ.

2. 1979 ರಲ್ಲಿ ನನ್ನ ಗಂಡ ಮೃತಪಟ್ಟಿದ್ದು ಆಗ ಎಲ್ಲ ಸಹೋದರರು ಒಟ್ಟು ಕುಟುಂಬದಲ್ಲಿ ವಾಸವಿದ್ದರು. ನನ್ನ ಗಂಡ ಸಹೋದರರು ಆಸ್ತಿ ಹಂಚಿಕೊಳ್ಳುವ ವೇಳೆ ನನ್ನ ಗಂಡನಿಗೆ ಯಾವುದೇ ಆಸ್ತಿಯನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ನಂತರ ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ತನ್ನ ತಂದೆಯ ಆಸ್ತಿಯಲ್ಲಿ ಭಾಗಾಂಶವನ್ನು ಕೇಳುತ್ತಿದ್ದಾಳೆ. 1 ನೇ ಪ್ರತಿವಾದಿಯು ತನ್ನ ಸಂಬಳದ ಹಣವನ್ನು ನನ್ನ ಗಂಡನ ಸಹೋದರರಿಗೆ ನೀಡಿದ ಕಾರಣ ಅವನ ಹೆಸರಿನಲ್ಲಿ ಆಸ್ತಿಯನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

3. 2 ನೇ ಪ್ರತಿವಾದಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನು ವಾದಿಯ ಕಡೆಯಿಂದ ಉದ್ದೇಶಪೂರ್ವಕಾಗಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(**ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓದಿ ಹೇ ಕೇ ಸರಿ ಅದೆ.

Sd/-30-06-2026
ಹಿರಿಯ ದಿವಾಣಿ ನ್ಯಾಯಾಧೀಶರು

**ಸಾಕ್ಷಿದಾರರ ಸಹಿಃ** **ಹಾಗೂ ಪ್ರ.ದ.ನ್ಯಾ.ದಂ. ಲಕ್ಮೇಶ್ವರ**